ಯಾರು ಇಲ್ಲ, ಬೇಜಾರು... ಊರಿಗೆ ಬಂದಂತೆ ಅನಿಸುವುದಿಲ್ಲ, ಮೂರು ವರ್ಷದ ಮಗನಿಗೂ ಊರಿನ ಸಂಭ್ರಮಗಳು ಯಾವುವೂ ಸಿಗುವುದಿಲ್ಲ ಎಂದು ನೆವ ಹೇಳಿ ತವರಲ್ಲಿ ಉಳಿಯುತ್ತಿದ್ದಳು. ಗೀತಕ್ಕನಿಗೆ ಅದೆಷ್ಟು ಬಾರಿ ಅನಿಸಿತ್ತು. ಅದು ನೆವವಲ್ಲ, ವಾಸ್ತವ. ತಾನೊಬ್ಬಳು ಮೂವತ್ತು ವರ್ಷಗಳಿಂದ ಈ ಮನೆಗಾವಲಿನ ಆಳಿನಂತೆ ಬದುಕುತ್ತಿದ್ದೇನೆ. ಅತ್ತೆ ಮಾವ ಇದ್ದಾಗ ಸೊಸೆ ಇದ್ದಾಳಲ್ಲ ಎಂದು ಮನೆಗಾವಲಿಗೆ ಬಿಟ್ಟು ನಾಂದಿ, ಮದುವೆ, ಉಪನಯನಗಳನ್ನೆಲ್ಲ ಪೂರೈಸುತ್ತಿದ್ದರು. ಮಕ್ಕಳ ಶಾಲೆ ಎಂದು ತಾನೆಲ್ಲೂ ಹೋಗುತ್ತಿರಲಿಲ್ಲ. ಈಗ ಅವರ್ಯಾರೂ ಇಲ್ಲ, ಮಗ ರವೀಂದ್ರ ಬೆಂಗಳೂರು ಸೇರಿದ್ದಾನೆ, ದೀಪಕ್ ಜರ್ಮನಿಯಲ್ಲಿದ್ದಾನೆ. ಪರಮಣ್ಣನಿಗೆ ತೋಟದ ಕೆಲಸ ಮುಗಿಯುವುದಿಲ್ಲ. ಮೊದಲಿನಂತೆ ನೆಂಟರಿಷ್ಟರು ಬರುವುದೂ ಈಗ ಕಡಿಮೆ.

ಒಂದಿಷ್ಟೂ ಹೊಸತನವನ್ನು ಕೃಷಿಯಲ್ಲಿ ಅಳವಡಿಸದ ಪರಮಣ್ಣನಿಗೆ ವರ್ಷವಿಡೀ ಕೆಲಸವಿರುತ್ತಿತ್ತು. ದಿನವಿಡೀ 'ಆಳು ಮಕ್ಕಳು' ಹೆಸರಿನ, ಬಂಧುಗಳಿಗಿಂತ ಹತ್ತಿರವಾದ ವೀರಭದ್ರ, ಮಂಜ, ಪುಟ್ಟನ ಒಡನಾಟ... ಅಪ್ಪಯ್ಯ ಕಲಿಸಿಕೊಟ್ಟ ಯಾವುದನ್ನು ಇನ್ನೂ ಬಿಡದೇ, ಅಪ್ಪಯ್ಯನ ಮಾದರಿಯ ಕೃಷಿಯನ್ನೇ ಮುಂದುವರಿಸಿಕೊಂಡು ಬರುತ್ತಿದ್ದ ಆತ ಸುತ್ತಮುತ್ತ ಊರಿಗೆಲ್ಲ ಅಪರೂಪದ ವ್ಯಕ್ತಿಯಾಗಿದ್ದ. ಕೊಟ್ಟಿಗೆಯಲ್ಲಿ ದೇಸಿ ತಳಿಯ ಹಸುಗಳು, ತೋಟಕ್ಕೆ ಸಾವಯವ ಗೊಬ್ಬರ ಮಾತ್ರ. ತೋಟಕ್ಕೆ ಮದ್ದು ಹೊಡೆಯುವುದನ್ನು ಬಿಟ್ಟರೆ ಮತ್ತೆಲ್ಲೂ ಯಂತ್ರದ ಪ್ರವೇಶವೇ ಇರಲಿಲ್ಲ. ಪರಂಪರೆಯನ್ನು ಉಳಿಸಿಕೊಂಡು ಹೋಗುತ್ತಿರುವ ಅವನ ಸಮೃದ್ಧ ಗ್ರಾಮೀಣ ಜೀವನದಲ್ಲಿ, ಮನೆ ಬಿಟ್ಟು ತನ್ನ ಇಚ್ಛೆಯಂತೆ ಗೇಟು ದಾಟಿ ಬಾರದ ಹೆಂಡತಿ ಮೂವತ್ತು ವರುಷಗಳಿಂದ ಸೊರಗುತ್ತಾ ಹೋಗಿದ್ದು ತಿಳಿಯಲೇ ಇಲ್ಲ. ಯಾರ ಮಾತೂ ಕೇಳದ ಅಪ್ಪನಿಗೆ ರವೀಂದ್ರ ಕೊಡುವ ಸಲಹೆಗಳೆಲ್ಲ ಆಚೆ ಕಿವಿಯಲ್ಲಿ ಕೇಳಿ ಈಚೆ ಕಿವಿಯಲ್ಲಿ ಬಿಡುವುದಾಗಿ ಹೋಗಿತ್ತು.

ಗೀತಕ್ಕ ಬಹಳಷ್ಟು ಸಾರಿ ಅಂದುಕೊಂಡಿದ್ದಳು. ತಾನು ಒಮ್ಮೆ ಗಟ್ಟಿ ಮನಸ್ಸು ಮಾಡಿ ಈ ಆರಡಿಯ ಗೇಟು ದಾಟಿ ಹೋಗಿಬಿಟ್ಟಿದ್ದರೆ ಪರಮಣ್ಣ ಇಷ್ಟೊಂದು ಸಮೃದ್ಧವಾದ ಬದುಕು ಬದುಕುತ್ತಿದ್ದನಾ? ಒಂದು ರಾತ್ರಿಯೂ ಅಪ್ಪನ ಮನೆಯಲ್ಲಿಯೂ ಉಳಿಯದ ತಾನು ಎರಡನೇ ಮಗ ದೀಪಕನ ಜೊತೆ ಜರ್ಮನಿಗೆ ಬರುತ್ತೇನೆಂದರೆ ಅವನೇನು ಬೇಡ ಅನ್ನುತ್ತಿರಲಿಲ್ಲ. ತನ್ನ ಬದುಕಿನ ಬಹುಪಾಲು ಸುಖವನ್ನು ಈ 'ಮನೆಗಾವಲು' ಎಂಬ ತಿಳಿಯದೆ ತನ್ನನ್ನು ಆವರಿಸಿಕೊಂಡ ಜವಾಬ್ದಾರಿ ನುಂಗಿಹಾಕಿತ್ತು. ಅಂಗಳದಾಚೆಗಿನ ಸಂಭ್ರಮಗಳು ಯಾವುವನ್ನೂ ಮನ ತುಂಬಿಸಿಕೊಳ್ಳಲೇ ಇಲ್ಲ. ಆಳುಮಕ್ಕಳಿಗೆ ಊಟಕ್ಕೆ ಮಾಡಿಟ್ಟು, ಅವರನ್ನು ಮನೆಗಾವಲಿಗಿರಿಸಿ, ಬದನೆಕಾಯಿ ಬಣ್ಣದ ರೇಷ್ಮೆ ಸೀರೆ ಉಟ್ಟು, ಪವನ ಸರ ಹಾಕಿ ಹನ್ನೆರಡೂವರೆ ಸೂರ್ಯ ನೆತ್ತಿಯ ಮೇಲೆ ಬರುವ ಹೊತ್ತಿಗೆ ಹೆಗಡೇರ ಓಮಿನಿ ಹತ್ತಿ, ಮದುವೆ ಮನೆಯೋ, ಉಪನಯನದ ಮನೆಯೋ ಎಂದು ಪೂರೈಸಿ, ಮತ್ತೆ ಆಳು ಮಕ್ಕಳಿಗೆ ಚಾ ಮಾಡಬೇಕೆಂದು ಅಡಿಕೆ ಪುಡಿಯ ಘಮ ಕೈಯಿಂದಾರುವ ಮೊದಲೇ ಓಮಿನಿ ಹತ್ತಿ ವಾಪಸ್ಸು ಹೊರಟು, ಅಷ್ಟು ಹೊತ್ತಲ್ಲಿ ತನ್ನ ಶ್ರೀಮಂತಿಕೆ, ದೊಡ್ಡಸ್ತಿಕೆ ಮೆರೆದದ್ದೇ ತನ್ನ ಇಷ್ಟು ವರ್ಷಗಳ ಸಂಭ್ರಮ.

ಆ ದಿನ ರಾತ್ರಿ ಕವಳ ಹಾಕುತ್ತಿದ್ದ ಪರಮಣ್ಣನ ಬಳಿ ಧೈರ್ಯ ಮಾಡಿ ಕೇಳಿಯೇಬಿಟ್ಟಳು.

'ಕೇಳ್ಬ... ಎಷ್ಟು ವರ್ಷ ಈ ವಂಟ್ಯನೆ? ಒಂಟಿ ಜೀವನ? ನಿಮಗಂತೂ ಎನ್ನ ಸುಖ ದುಃಖ ಬೇಡ. ಮದುವೆಯಾಗಿ ಮೂವತ್ತು ವರ್ಷ ಆತು. ಇಪ್ಪತ್ತೈದು ವರ್ಷಗಳ ತನಕ ಅತ್ತೆ–ಮಾವನ ಯಜಮಾನಿಕೆಯಲ್ಲಿ ಮೈ ಹಿಡಿ ಮಾಡ್ಕ್ಯಂಡು ಬದಕ್ದೆ. ಈಗ ನೀವೇನೋ ಯಜಮಾನ, ಊರಿಗೆ ಹಿರಿಯ. ಆದರೆ ಆನು ಯಾರಿಗೆ ಯಜ್ಮಾನಿ? ಈ ದೊಡ್ಡ ಮನೆ, ಚಾಲಿ ಕಣ, ಅಟ್ಟದ ಮೇಲಿನ ಅಡಿಕೆ, ಗಳಿಸಿದ್ದು ಉಳಿಸಿದ್ದು ಎಲ್ಲವನ್ನೂ ಕಾಯುವ ಕಾವಲುಗಾರ್ತಿ... ಅದು ಹೋಗ್ಲಿ. ನಿಮ್ಮ ಈ ಸಮೃದ್ಧ ಜೀವನಕ್ಕೆ, ಎನ್ನ ಜೀವನ, ಸಂಭ್ರಮ, ಆಸೆ ಎಲ್ಲಾ ತ್ಯಾಗ ಮಾಡಿ ಮನೆ ಕಾಯದೊಂದೇ ಎನ್ನ ಕೆಲಸ ಹೇಳಿ ಅಂದ್ಕಂಡು ಮಾಡ್ತಾ ಇದ್ನಲೀ... ಕೈ ಹಿಡಿದು ಕರ್ಕಂಡ್ ಬಂದವಳಿಗೆ ಒಂದ್ ಮುಷ್ಟಿ ಪ್ರೀತಿ, ಆತ್ಮೀಯತೆ, ಅವಳ ಆರೋಗ್ಯ ಯಾವುದು ಸಂಬಂಧ ಇಲ್ಲೇ ನಿಮಗೆ' ಎಂದು ಕಣ್ಣೀರಿಟ್ಟಳು. ಪರಮಣ್ಣ ಕದಲಲಿಲ್ಲ.

ಮರುದಿನ ಸಂಜೆ ಅಂಗಳದಲ್ಲಿ ಚಾಲಿ ಹೆಕ್ಕುತ್ತಿದ್ದ ಗೀತಕ್ಕನಿಗೆ ತನ್ನ ಬಾಲ್ಯದ ದಿನಗಳೆಲ್ಲ ನೆನಪಾದವು. ಸಂಜೆಯ ಬಾನಲ್ಲಿ ಬೆಳ್ಳಕ್ಕಿಗಳ ಹಿಂಡು ಗೂಡಿನೆಡೆಗೆ ಹಾರುತ್ತಿದ್ದವು. ಗೀತಕ್ಕನಿಗೆ ಅರಿವಿಲ್ಲದಂತೆ ಹೇಳ ತೊಡಗಿದಳು.

'ಬೆಳ್ಳಕ್ಕಿ ಬೆಳ್ಳಕ್ಕಿ ಹಳೆ ಉಂಗುರ ಕೊಡ್ತೀನಿ... ಹೊಸ ಉಂಗುರ ಕೊಡ್ ಕೊಡ್ ಕೊಡ್...'

ಬೆಳ್ಳಕ್ಕಿಗೆ ಕೇಳಿಸಿತೋ ಇಲ್ಲವೋ ಗೊತ್ತಿಲ್ಲ. ಅಂತೂ ಒಂದು ದಿನ ಪರಮಣ್ಣನಿಗಂತೂ ಕೇಳಿಸಿತು. ತನ್ನ ಹೆಂಡತಿಯಲ್ಲಾಗುತ್ತಿರುವ ವಿಚಿತ್ರ ಬದಲಾವಣೆಗಳು ಅವನ ಗಮನಕ್ಕೆ ಬಾರದೇ ಇರಲಿಲ್ಲ. ಗೀತಕ್ಕ ಹಗಲಿಡೀ ಮಲಗುತ್ತಿದ್ದಳು, ರಾತ್ರಿ ಎದ್ದಿರುತ್ತಿದ್ದಳು. ಯಾವುದಕ್ಕೋ ಹಾತೊರೆಯುತ್ತಿದ್ದಳು. ಮಾತನಾಡಲು ಯಾರಾದರೂ ಸಿಗುತ್ತಾರಾ ಎಂದು ಗೇಟಿನಾಚೆ ನೋಡುತ್ತಿದ್ದಳು. ಪ್ರತಿ ಸಂಜೆಯೂ ಇಳಿಬಿಸಿಲಿನ ಹೊತ್ತಿಗೆ ಅಂಗಳದ ತುದಿಗೆ ನಿಂತು ಬೆಳ್ಳಕ್ಕಿ ಬೆಳ್ಳಕ್ಕಿ... ಹಳೆ ಉಂಗುರ ಕೊಡ್ತೀನಿ, ಹೊಸ ಉಂಗುರ ಕೊಡ್ ಕೊಡ್... ಎಂದು ಬೆಳ್ಳಕ್ಕಿ ಹಿಂಡು ನೋಡುತ್ತಾ ಕೂಗುತ್ತಾ ಕಳೆಯುತ್ತಿದ್ದಳು. ಪರಮಣ್ಣನಿಗೆ ಹೆಂಡತಿಯ ಈ ವರ್ತನೆ ದೊಡ್ಡ ಸಮಸ್ಯೆಯಾಗುತ್ತಾ ಹೋಯಿತು. ಗೀತಕ್ಕನಿಗೆ ಮಳ್ಳು ಹಿಡಿದಿದೆಯಂತೆ ಎಂದು ಊರಲ್ಲೆಲ್ಲ ಗುಸುಗುಸು ಶುರುವಾಯಿತು. 'ಪರಮಣ್ಣ ಹೆಂಡತಿಯನ್ನು ನಿರ್ಲಕ್ಷಿಸಿ ಈ ಕೂಪಕ್ಕೆ ತಳ್ಳಿದ.' 'ಕೊಟ್ಟಿಗೆಯ ಕರುವಿಗೆ ತೋರುವ ಪ್ರೀತಿಯಲ್ಲಿ ಒಂದು ಹಿಡಿ ಪ್ರೀತಿಯನ್ನು ಗೀತಕ್ಕನಿಗೆ ತೋರಿಸಿದ್ದರೆ ಇಂದು ಈ ಪರಿಸ್ಥಿತಿ ಬರುತ್ತಿರಲಿಲ್ಲ.' ಇಂಥ ಮಾತುಗಳು ಪರಮಣ್ಣ ಹಾಲು



ಡೈರಿಯಿಂದ ಬರುವಾಗಲೋ, ಊರ ಬಾಗಿಲಿನ ತಿರುವಿನಲ್ಲಿ ತೋಟಕ್ಕೆ ಇಳಿಯುತ್ತಿರುವಾಗಲೋ ಬೆನ್ನ ಹಿಂದೆ ಕೇಳದೆ ಇರುತ್ತಿರಲಿಲ್ಲ. ಅತ್ತ ಗದ್ದೆಗಿಳಿದರೂ ಆಳು ಮಕ್ಕಳದ್ದು ಅದೇ ಸುದ್ದಿ. 'ಬಂಗಾರದಂಥ ಗೀತಮ್ಮ ಇಡೀ ಆಯಸ್ಸು ಮನೆ ಮನೆ ಅಂತ ಮನೆಗಾವಲಾಗಿ ಕಳೆದುಬಿಟ್ರು, ಹೆಗಡೇರಿಗೆ ಹೆಂಡ್ತಿ ಹೇಳ ಪಾಶೆ ಒಂಚೂರೂ ಇಲ್ಲ, ಇನ್ನು ಅಮ್ಮನ ನೋಡಿಕೊಳ್ಳುವವರು ಯಾರು?' ಇಂಥ ಮಾತುಗಳೆಲ್ಲ ಪರಮಣ್ಣನ ಹೆಜ್ಜೆ ಸಪ್ಪಳವಾಗುತ್ತಲೇ ನಿಲ್ಲುತ್ತಿದ್ದವು. ಪರಮಣ್ಣನಿಗೆ ಈಗ ಮನೆಯಿಂದ ಹೊರಗೆ ಕಾಲಿಡುವುದಕ್ಕೆ ಮುಜುಗರವಾಗುತ್ತಿತ್ತು.

ಆಯಿಯ ಸ್ಥಿತಿ ಕೇಳಿ ಒಂದು ದಿನದ ಮಟ್ಟಿಗೆ ರವೀಂದ್ರ ಬೆಂಗಳೂರಿಂದ ಬಂದು ಹೋಗಿದ್ದ. 'ಆಕೆ ಖಿನ್ನತೆಗೆ ಹೋಗುತ್ತಿದ್ದಾಳೆ, ಅವಳನ್ನು ಒಬ್ಬಳೇ ಬಿಡಬೇಡಿ, ಋತುಬಂಧದ ಸಮಯದಲ್ಲಿ ಭಾವನೆಗಳ ತೀವ್ರ ಏರಿಳಿತಗಳು ಸಾಮಾನ್ಯ, ಆದರೆ ಇವರನ್ನು ಯಾವುದೋ ಸಮಸ್ಯೆ ತೀವ್ರವಾಗಿ ಕಾಡುತ್ತಿದೆ, ಕಾಳಜಿ ತೆಗೆದುಕೊಳ್ಳಿ' ಎಂದು ಮಾತ್ರೆ ಕೊಟ್ಟು ಕಳಿಸಿದ್ದರು.

ರವೀಂದ್ರ ಇದೆಲ್ಲ ಹೇಳಿದ ಮೇಲೆ ಪರಮಣ್ಣನಿಗೆ ಆಕಾಶ ತಲೆ ಮೇಲೆ ಬಿದ್ದಂತಾಯಿತು. ಹೆಂಡತಿಗೆ ಹೀಗಾಯಿತಲ್ಲ ಎಂಬುದಕ್ಕಿಂತ ಮನೆಗಾವಲಿನ ಜೊತೆ ಇನ್ನೂ ಹೆಂಡತಿಯನ್ನು ಕಾಯಬೇಕಲ್ಲ! ಅದಕ್ಕೆ ಜನ ಯಾರು? ಎಂಬುದು ಪರಮಣ್ಣನ ದೊಡ್ಡ ಸಮಸ್ಯೆಯಾಯಿತು. ನೆಂಟರಿಷ್ಟರು